# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ　　ದಿನಾಂಕ : DATE: 19/02/2020

# ಕಾಲಹರಣದ ಹೆಸರಲ್ಲಿ ಕೋಲಾಹಲ

**ವಿಧಾನಸಭೆ:** ಪ್ರತಿ ಅಧಿವೇಶನದಂತೆ ಈ ಅಧಿವೇಶನದಲ್ಲಿಯೂ ನಿಯಮ 60ರಲ್ಲಿ ಚರ್ಚೆಗೆ ಅವಕಾಶ ನೀಡದ ಸ್ಪೀಕರ್ ವಿರುದ್ಧ ಪ್ರತಿಪಕ್ಷ ಶಾಸಕರು ಮುಗಿಬಿದ್ದರು. ಇದರೊಂದಿಗೆ ಕಾಗೇರಿ ಅವರು ಬಳಸಿದ 'ಕಾಲಹರಣ' ಶಬ್ದ ಇಡೀ ಸದನದಲ್ಲಿ ಕೋಲಾಹಲ ಸೃಷ್ಟಿಸಿತು.

ಮಂಗಳವಾರ ಬೆಳಗ್ಗೆ ನಿಯಮ 60ರಲ್ಲಿ ನಿಲುವಳಿ ಸೂಚನೆ ಮಂಡಿಸಿ ಚರ್ಚೆಗೆ ಅವಕಾಶ ನೀಡುವಂತೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಆಗ್ರಹಿಸಿದರು. ಆದರೆ ನಿಯಮ 60ರಲ್ಲಿ ನೀಡಲು ಸಾಧ್ಯವಿಲ್ಲ ಎನ್ನುವ ಸ್ಪಷ್ಟ ಮಾತನ್ನು ಕಾಗೇರಿ ಅವರು ಹೇಳಿ, 69ರಲ್ಲಿ ಅವಕಾಶ ಕಲ್ಪಿಸುವುದಾಗಿ ಹೇಳಿದರೂ, ಕೇಳದೇ ತಮ್ಮ ಆಗ್ರಹವನ್ನು ಮುಂದುವರಿಸಿದಕ್ಕೆ, 'ಸುಮ್ಮನೆ ಕಾಲಹರಣ ಮಾಡಬೇಡಿ. ರಾಜ್ಯಪಾಲರ ವಂದನಾ ನಿರ್ಣಯಕ್ಕೆ ಅವಕಾಶ ನೀಡಿ' ಎನ್ನುವ ಮಾತು ಪ್ರತಿಪಕ್ಷ ಸದಸ್ಯರನ್ನು ಕೆರಳಿಸಿತು.

ಪ್ರತಿಪಕ್ಷ ನಾಯಕರು ಮಾತನಾಡುವುದು ಅಥವಾ ವಿಷಯ ಪ್ರಸ್ತಾಪಿಸುವುದೇ ಕಾಲಹರಣ ಎನ್ನುವುದಾದರೆ ಸದನ ನಡೆಸುವುದಾದರೂ ಏಕೆ? ಪ್ರತಿಪಕ್ಷ ನಾಯಕರಿಗೆ ಮಾತನಾಡಲು ಅವಕಾಶ ನೀಡುವುದಿಲ್ಲ ಎನ್ನುವುದಾದರೆ ಸದನದಲ್ಲಿ ನಾವ್ಯಾಕೆ ಇರಬೇಕು? ಎಂದರು. ಅದಕ್ಕೆ ಬಿಜೆಪಿ ನಾಯಕರು 'ಅದನ್ನು ನೀವು ನಿರ್ಧರಿಸಿ' ಎನ್ನುತ್ತಿದ್ದಂತೆ ಆಕ್ರೋಶಗೊಂಡ ಕಾಂಗ್ರೆಸ್ ನಾಯಕರು ಸಭಾತ್ಯಾಗ ಮಾಡಿದರು. ಬಳಿಕ ಮಧ್ಯಾಹ್ನದ ಭೋಜನ ವಿರಾಮದಲ್ಲಿ ಸಂಧಾನ ಸಭೆ ನಡೆಸಿದ್ದರಿಂದ ಭೋಜನದ ಬಳಿಕ ಸದನದಲ್ಲಿ ಕಾಂಗ್ರೆಸ್ ನಾಯಕರು ಪಾಲ್ಗೊಂಡರು.

**ಜೆಡಿಎಸ್ ಮೌನ:** ಪೌರತ್ವ ತಿದ್ದುಪಡಿ ಕಾಯಿದೆ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕೆಂದು ಅರ್ಜಿ ಸಲ್ಲಿಸಿದ್ದ ಜೆಡಿಎಸ್, ಕಾಂಗ್ರೆಸ್‌ನ ಸಭಾತ್ಯಾಗಕ್ಕಾಗಲಿ, ಆ ಪಕ್ಷದ ನಾಯಕರ ಮಾತಿಗಾಗಲಿ ದನಿಗೂಡಿಸದೇ ಅಂತರ ಕಾಯ್ದುಕೊಂಡಿತ್ತು. ತೊಗರಿ ಬೆಳೆಗಾರರ ಸಮಸ್ಯೆ ಮತ್ತು ಕೊಬ್ಬರಿ ಸಮಸ್ಯೆಗೆ ಅವಕಾಶ ಕೊಡಬೇಕೆಂದು ಜೆಡಿಎಸ್ ಶಾಸಕರು ಆಗಾಗ ಸಮಯ ಕೇಳುತ್ತಿದ್ದರು.